# 34

# “ಈತನು ಯಾರು?”

### ಓದುವ ಮನೆಪಾಠ #13

V. ಎರಡನೇ ಪಸ್ಕದಿಂದ ಮೂರನೆಯದಕ್ಕೆ (ಮುಂದುವರೆಯುವದು).

P. ಬಿರುಗಾಳಿಯನ್ನು ಶಾಂತ ಪಡಿಸಿದ್ದು (ಮತ್ತಾಯ 8:18, 23-27; ಮಾರ್ಕ 4:35-41; ಲೂಕ 8:22-25).

Q. ದೆವ್ವ ಹಿಡಿದ ಇಬ್ಬರನ್ನು ಗುಣಪಡಿಸಿದ್ದು (ಮತ್ತಾಯ 8:28-34; 9:1; ಮಾರ್ಕ 5:1-21; ಲೂಕ 8:26-40).

R. ಪಾಪಿಗಳೊಂದಿಗೆ ಬೋಜನ (ಉಪವಾಸ ಚರ್ಚೆ) (ಮತ್ತಾಯ 9:10-17; ಮಾರ್ಕ 2:15-22; ಲೂಕ 5:29-39).

“ಕಾರ್ಯ ನಿರತ ದಿನದ” ಕುರಿತು ಆ ಪಾಠದಲ್ಲಿ ಅಂತ್ಯ ಮಾಡೋಣ - ಅಂದು ಪರಿಸಾಯರೆಲ್ಲರು ಯೇಸುವಿನ ಮೇಲೆ ದೂಷಣೆಯ ಮಾತುಗಳನ್ನಾಡಿದ್ದರಿಂದ ಆತನು ಗಲಿಲಾಯ ಸಮುದ್ರದ ಪೂರ್ವ ಪ್ರದೇಶಕ್ಕೆ ಹೋದನು. ಆತನು ಬಿರುಗಾಳಿಯನ್ನು ಶಾಂತಗೊಳಿದಾಗ ಆತನ ಶಿಷ್ಯರು ಹೇಳಿದಂತೆ: “ಈತನು ಯಾರಿರ ಬಹುದು? ಗಾಳಿಯೂ ಸಮುದ್ರವೂ ಈತನು ಹೇಳದಂತೆ ಕೇಳುತ್ತವಲ್ಲಾ?” (ಮಾರ್ಕ 4:41; ನೋಡಿ ಲೂಕ 8:25; ಮತ್ತಾಯ 8:27) ಅಂದರು. ಆತನ ಸೇವಾ ಅವಧಿಯಲ್ಲಿ “ಈತನು ಯಾರು?” ಎಂಬ ವ್ಯಾಖ್ಯಾನವು ಪ್ರತಿಧ್ವನಿಗೊಂಡಿತು - ಅಂದರೆ ಆತನು ಯಾರು ಎಂಬ ಅಂಶವನ್ನು ಜನರು ವಿವರಿಸಲಾರದೆ ಹೋದರು. ಮನೆಯ ಮೇಲ್ಛಾವಣಿಯ ಮೂಲಕ ವರ್ಗಾಯಿಸಲ್ಪಟ್ಟು, ಗುಣಮುಖವಾದ ಪಾರ್ಶ್ವವಾಯು ರೋಗಿಯ ಕುರಿತು, “ಫರಿಸಾಯರು ದೇವದೂಷಣೆಯ ಮಾತನಾಡುವ ಇವನು ಎಷ್ಟರವನು?” (ಲೂಕ 5:21) ಅಂದರು. ಯೇಸುವಿನ ಪಾದವನ್ನು ಒಬ್ಬ ಸ್ತ್ರೀಯು ತನ್ನ ಕಣ್ಣೀರಿನಿಂದ ತೊಳೆದ ಸಂದರ್ಭದಲ್ಲಿ, ಯೇಸು ಆಕೆಯನ್ನು ಕ್ಷಮಿಸಿದಾಗ, ಅಲ್ಲಿ ನೆರೆದಿದ್ದ ಜನರು, “ಪಾಪಗಳನ್ನು ಕ್ಷಮಿಸುವವನು ಇವನಾರು?” (ಲೂಕ 7:49) ಅಂದರು. ಯೇಸುವಿನ ಮಹತ್ಕಾರ್ಯಗಳ ವಾರ್ತೆಯನ್ನು ಕೇಳಿದ ಹೆರೋದನು, “ಇವನಾರು ಇವನ ವಿಷಯವಾಗಿ ಆಶ್ಚರ್ಯ ಸಂಗತಿಗಳನ್ನು ಕೇಳುತ್ತೇನಲ್ಲಾ” (ಲೂಕ 9:9)? ಅಂದನು, ಯೇಸು ತಾನು ಯೆರೂಸಲೇಮಿಗೆ ಪ್ರವೇಶಮಾಡಿದಾಗ, “ಆ ಪಟ್ಟಣದವರು ಈತನು ಯಾರು?” (ಮತ್ತಾಯ 21:10) ಅಂದರು. ಯೇಸುವಿನ ಕುರಿತಾಗಿ ಜನರು ಘಾಸಿಗೊಳಗಾದ ಮೂರು ಸಂದರ್ಭಗಳನ್ನು ಈ ಪಾಠದಲ್ಲಿ ನೀಡಲಾಗಿದೆ.

### “ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತಾವಲ್ಲಾ, ಈತನು ಯಾರಿರಬಹುದು?”[1] (ಮತ್ತಾಯ 8:18, 23-37; ಮಾರ್ಕ 4:35-41; ಲೂಕ 8:22-25)

“ಅತಿ ಪ್ರಮುಖವಾದ ಸಾಮ್ಯಗಳ ಗುಂಪಿನ” ಬಗ್ಗೆ ಹಿಂದಿನ ಪಾಠಗಳಲ್ಲಿ ಚರ್ಚಿಸಿದ್ದೆವು. ಮತ್ತಾಯನ ಪ್ರಕಾರ, “ಯೇಸು ಈ ಸಾಮ್ಯಗಳನ್ನು ಮುಗಿಸಿದ ಬಳಿಕ ಅಲ್ಲಿಂದ ಹೊರಟು ಹೋದನು” (ಮತ್ತಾಯ 13:53).[2] ಆತನು ಗಲಿಲಾಯದ ಪೂರ್ವ ಪ್ರದೇಶಕ್ಕೆ ಹೋದನು

ಎಂದು ಮಾರ್ಕನು ಹೇಳುತ್ತಾನೆ: "ಆ ದಿನದಂದು [ಆತನು ಸಾಮ್ಯವನ್ನು ಹೇಳಿದ ದಿನದಲ್ಲಿ (ಮಾರ್ಕ 4:34)], ಆ ಹೊತ್ತು ಸಾಯಂಕಾಲವಾದಾಗ ಆತನು ಅವರಿಗೆ ಆಚೆ ದಡಕ್ಕೆ ಹೋಗೋಣ ಅಂದನು"[3] (ಮಾರ್ಕ 4:35). ಆತನು ಆಚೆದಡಕ್ಕೆ ಹೊದ ನಾಲ್ಕು ದಾಖಲೆಗಳನ್ನು ನೀಡಲಾಗಿದೆ. ಮಾರ್ಕನ ಪ್ರಕಾರ, "ಅವರು ಆ ಜನರ ಗುಂಪನ್ನು ಬಿಟ್ಟು ಆತನನ್ನು ಅದೇ ದೋಣಿಯಲ್ಲಿ ಹಾಗೆಯೇ ಕರಕೊಂಡು ಹೋದರು" (ಮಾರ್ಕ 4:36ಎ) - ಅವರು ಯಾವ ಸಿದ್ಧತೆಯನ್ನು, ಅಥವಾ ಆಹಾರವನ್ನು ಹೊಂದದೆ ಹೋಗಿದ್ದರು, "ಅವರ ಸಂಗಡ ಬೇರೆ ದೋಣಿಗಳಲ್ಲಿಯೂ ಜನರಿದ್ದರು" (ಮಾರ್ಕ 4:36ಬಿ). ಯೇಸು ಇದ್ದಂಥ ದೋಣಿಯ ಸಂಗಡ ಇತರರೂ ಇದ್ದರು (ಮಾರ್ಕ 4:1). ಈ ಕಾರಣದಿಂದ, ಅಲ್ಲಿ ಆತನ ಮಾತನ್ನು ಕೇಳಲು ಅಧಿಕ ಜನರು ಸೇರಿ ದ್ದರು. ಇತರ ಸಾಕ್ಷಿಗಳು ಇದ್ದರು ಎಂಬುದಕ್ಕೆ ಈ ವಿಚಾರವನ್ನು ತಿಳಿಸಲಾಗಿದೆ.

ಜನ ಸಮೂಹದಿಂದ ದೂರವಿರುವ ಸಲುವಾಗಿ ಯೇಸು ಇಲ್ಲಿಗೆ ಬಂದಿದ್ದನು (ನೋಡಿ ಮತ್ತಾಯ 8:18; ಮಾರ್ಕ 4:36). ಆತನು ಸಂಪೂರ್ಣ ದೇವರಾಗಿದ್ದರೂ, ಸಂಪೂರ್ಣ ಮನುಷ್ಯನೂ ಆಗಿದ್ದನು,[4] ಆತನು ಆ "ದಿನದಲ್ಲಿ ಬಹು ಕಾರ್ಯ" ನಿರತನಾದ್ದರಿಂದ, ಆಯಾಸಗೊಂಡಿದ್ದನು. ಆದ್ದರಿಂದ ಆತನು ಬೇಗನೆ ನಿದ್ರೆಹೋದನು (ಲೂಕ 8:23). "ಆತನು ತಲೆದಿಂಬನ್ನು ಒರಗಿ ನಿದ್ದೆ ಮಾಡುತ್ತಿದ್ದನು ..." (ಮಾರ್ಕ 4:38). ಹಿಂಬದಿಯಲ್ಲಿ ಅಧಿಕವಾದ ಅವಕಾಶವಿತ್ತು. "ತಲೆದಿಂಬು" ಒಂದು ವೇಳೆ ಅದು ಸುತ್ತಿ ಇಡಬಹುದಾದ ಚಿಕ್ಕ ಹಾಸಿಗೆ ಇರಬಹುದು J. W. ಶೆಫರ್ಡ್‌ರವರು ಬರೆದು,

> ಆಯಾಸ, ಧೈಹಿಕ ಬಲಹೀನತೆಯು ಆತನಲ್ಲಿ ಇದ್ದದರಿಂದ ಆತನು ನಿದ್ರಾಕ್ರಾಂತನಾದನು ಸಮುದ್ರದ ಹಿತಕರವಾದ ವಾತಾವರಣದಲ್ಲಿ ವಿಶ್ರಾಂತಿ ಪಡೆದನು. ಶಿಷ್ಯರು ಆತನ ಬಳಿಯಲ್ಲಿ ನಿಂತು, ಆ ದಿನದಲ್ಲಿ ನಡೆದ ಕಾರ್ಯಗಳ ಬಗ್ಗೆ ಮಾತನಾಡುತ್ತಿರಬಹುದು ಇತರರು ಸಮುದ್ರಯಾನವನ್ನು ಮಾಡುತ್ತಿದ್ದರು, ದೋಣಿಯನ್ನು ಮುನ್ನಡೆಸುತ್ತಿದ್ದರು.[5]

ಕಪೆರ್ನೌಮಿನ ನೀರಿನ ತೀರದಿಂದ, "ಗೆರೆಸೇನರ ನಾಡು" ಕೆಲವೇ ಮೈಲುಗಳ ಅಂತರದಲ್ಲಿತ್ತು.[6] ಹಿತಕರವಾದ ವಾತಾವರಣವಿದ್ದಲ್ಲಿ, ಅದು ಎರಡರಿಂದ ಮೂರು ತಾಸಿನ ಪ್ರಯಾಣವಾಗಿತ್ತು.

ಆದರೆ ಈ ಪ್ರಯಾಣದಲ್ಲಿ ಅಹಿತಕರ ವಾತಾವರಣವಿತ್ತು. ಸ್ವಲ್ಪಕಾಲದ ಮುಂದೆ ಬಿರುಗಾಳಿ ಬೀಸಲಾರಂಭಿಸಿತು: "... ಸಮುದ್ರವು ಅಲ್ಲೋಲ ಕಲ್ಲೋಲವಾಗಿ ದೋಣಿಯು ತೆರೆಗಳಿಂದ ಮುಚ್ಚಿ ಹೋಯಿತು" "ಬಿರುಗಾಳಿ ಕೆರೆಯ ಮೇಲೆ ಬರಲು ... ಅಪಾಯಕ್ಕೆ ಗುರಿಯಾದವು" (ಮತ್ತಾಯ 8:24; ಲೂಕ 8:23ಎ). "ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿಯು ... ಆಗಲೇ ತುಂಬುವದಕ್ಕೆ ಬಂದಿತ್ತು" (ಮಾರ್ಕ 4:37). "ನೀರು ತುಂಬಿಕೊಂಡಿದ್ದರಿಂದ ಅವರು ಅಪಾಯಕ್ಕೆ ಗುರಿಯಾದರು" (ಲೂಕ 8:23).

ಗಲಿಲಾಯ ಸಮುದ್ರದಲ್ಲಿ ಆಗಾಗ್ಗೆ ಬಿರುಗಾಳಿ ಬೀಸುತ್ತಿತ್ತು. ಅದು ಸಮುದ್ರ ಮಟ್ಟದಿಂದ ಏಳು ನೂರು ಅಡಿಗಳ ತಳದಲ್ಲಿತ್ತು, ಬೆಟ್ಟ ಪ್ರದೇಶಗಳಿಂದ ಸುತ್ತುವರೆದಿತ್ತು. ಬೆಟ್ಟ ಪ್ರದೇಶ ಗಳಿಂದ ತಣ್ಣಗಿನ ಗಾಳಿ ಬೀಸುತ್ತಲೇ. ಶಾಂತವಾದ ಸಮುದ್ರವು ಅಶಾಂತವಾಗುತ್ತಿತ್ತು. ಆ ದೋಣಿಯಲ್ಲಿದ್ದವರು ಬೆಸ್ತರೇ ಆಗಿದ್ದರಿಂದ, ಅನೇಕ ಸಾರಿ ಇಂಥಹ ಬಿರುಗಾಳಿಯನ್ನು ನೋಡಿದ್ದರು. ಇಂಥಹ ಬೆಸ್ತರು ಹೆದರಿದ್ದರು ಎಂಬ ಸಂಗತಿಯಿಂದ, ಆ ಬಿರುಗಾಳಿ ಬಹು ಪ್ರಪಂಡವಾಗಿತ್ತು ಎಂದು ಅರಿಯುತ್ತೇವೆ.

ದೋಣಿಯು ತೆರೆಗಳ ಸುಳಿವಿಗೆ ಸಿಕ್ಕಿಕೊಂಡಿದ್ದರೂ, ಯೇಸು ನಿದ್ರಿಸುತ್ತಲೇ ಇದ್ದನು. "ಬಿರುಗಾಳಿಯ ನಡುವೆಯು ನಿದ್ರಿಸುತ್ತಿರುವ ಈತನು ಯಾರು?" ಎಂದು ನಾವು ಕೇಳಬಹುದು. ಆಯಾಸಗೊಂಡಿರುವ ವ್ಯಕ್ತಿ ಎಂಬುದು ಮೊದಲ ಉತ್ತರವಾಗಿದೆ. "ಆಯಾಸಗೊಂಡಿದ್ದರೂ,

ದೇವರ ಮೇಲೆ ಭರವಸವಿಟ್ಟಿರುವ ವ್ಯಕ್ತಿ ಎಂಬುದು ಮತ್ತು ದೃಢವಾದ ಉತ್ತರವಾಗಿದೆ."

ಬಿರುಗಾಳಿಯ ನಿಮಿತ್ತ ಯೇಸುಗೊಂದಲಕ್ಕೊಳಗಾಗದಿದ್ದರೂ, ಆತನ ಶಿಷ್ಯರು ಗೊಂದಲಕ್ಕೊಳಗಾಗಿದ್ದರು. ಸುವಾರ್ತೆಗಳ ಪ್ರಕಾರ, "ಅವರ ಸ್ವರಗಳು ಗೊಂದಲಮಯವಾಗಿತ್ತು"[7]: "ಅವರು ಆತನ ಹತ್ತಿರ ಬಂದು ಗುರುವೇ ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು!" (ಲೂಕ 8:24); "ನಾವು ನಾಶವಾಗುತ್ತಿದ್ದೇವೆ ..., ನಮ್ಮನ್ನು, ಕಾಪಾಡು ಅಂದರು!" (ಮತ್ತಾಯ 8:25); "... ಗುರುವೇ ... ನಾವು ಮುಳುಗಿ ಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ?" ಅಂದರು (ಮಾರ್ಕ 4:38).

ಯೇಸುವಿನಿಂದ ಅವರು ಬಯಸಿದ ಸಂಗತಿಯನ್ನು ನಾವು ಅರಿಯವು ಆತನು ಬಿರುಗಾಳಿಯನ್ನು ಈ ಹಿಂದೆ ಶಾಂತ ಮಾಡಿದ್ದನ್ನು ಅವರು ನೋಡಿರಲಿಲ್ಲ. ಆತನು ಬಿರುಗಾಳಿಯನ್ನು ನಿಲ್ಲಿಸಿದಾಗ ಅವರಿಗೆ ಸಹಜವಾದ ಆಶ್ಚರ್ಯವಾಗಿರಬಹುದು (ಮತ್ತಾಯ 8:27; ಮಾರ್ಕ 4:41; ಲೂಕ 8:25). ಭಯದಿಂದ ತನ್ನ ತಂದೆ ತಾಯಿಗೆ ಕೂಗುವ ಮಗುವಿನಂತೆ ಅವರು, ಏನನ್ನಾದರೂ ಮಾಡು ಎಂದಿರಬಹುದು. "ಏನನ್ನಾದರೂ!" - ಮಾಡು ಎಂದಿರಬಹುದು, "ಏನನ್ನಾದರು" ಅಂದರೆ ಏನು.[8]

ಶಿಷ್ಯರು ಭಯ ಭ್ರಾಂತರಾಗಿದ್ದರೂ, ಯೇಸು ಶಾಂತನಾಗಿದ್ದನು: "ಅಲ್ಪ ವಿಶ್ವಾಸಿಗಳೇ ಯಾಕೆ ಧೈರ್ಯಗೆಡುತ್ತೀರಿ ಎಂದು ಯೇಸು ಹೇಳಿದನು" (ಮತ್ತಾಯ 8:26ಎ).[9] "ಆತನು ಎದ್ದು ಗಾಳಿಯನ್ನು ಗದರಿಸಿದನು" (ಲೂಕ 8:24ಬಿ; ಮಾರ್ಕ 4:39ಎ). "ಗಾಳಿ ನಿಂತು"; "ಹೋಗಿ ಎಲ್ಲವೂ ಶಾಂತವಾಯಿತು" (ಲೂಕ 8:24; ಮಾರ್ಕ 4:39ಬಿ). ಬಿರುಗಾಳಿ ಹಾಗೂ ತೆರೆಗಳು ಏಕಕಾಲದಲ್ಲಿ ಶಾಂತವಾದದ್ದು. ಎರಡು ಅದ್ಭುತಗಳಾಗಿವೆ. ಸಾಧಾರಣವಾಗಿ ಬಿರುಗಾಳಿ ತಗ್ಗಿದ ನಂತರವು, ತೆರೆಗಳು ಕ್ರಮೇಣ ಶಾಂತವಾಗುತ್ತವೆ.

ಗಾಳಿ ಹಾಗೂ ತೆರೆಗಳ ಅನುಭವ ಶಿಷ್ಯರಿಗೆ ಸಾಧಾರಣವಾಗಿದ್ದರು, ಈ ದಿನದ ಅದ್ಭುತ ವಿಚಿತ್ರವಾಗಿತ್ತು. ಅವರು ಸಂತೋಷದಿಂದ[10] "ಈತನು ಎಂಥವನಾಗಿರಬಹುದು ಎಂದು ಉದ್ಘರಿಸಿದರು ...?" (ಮತ್ತಾಯ 8:27); "ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಅಂದರು?" (ಲೂಕ 8:25ಬಿ). "ಆತನು ಶಕ್ತಿಯುತವಾದ ಮನುಷ್ಯನು" ಎಂಬುದೇ ಉತ್ತರವಾಗಿದೆ (ನೋಡಿ ಲೂಕ 4:14; 5:17; 6:19; 8:46; 1 ಕೊರಿಂಥ 5:4; 2 ಕೊರಿಂಥ 12:9).

ಈ ಕಥೆಯು ನಮ್ಮೆಲ್ಲರಿಗೆ ಅನ್ವಯಿಸುತ್ತದೆ. ನಾವೆಲ್ಲರೂ ಜೀವನವೆಂಬ ಬಿರುಗಾಳಿಯಲ್ಲಿ ಸಿಲುಕಿದ್ದೇವೆ. ಅನೇಕ ಸಾರಿ, ಆ ಶಿಷ್ಯರಂತೆ ನಾವುಗಳು ಸಹ ನಂಬಿಕೆ ಇಲ್ಲದವರಾಗಿ, "ಗುರುವೇ ಕಾಪಾಡು ನಾಶವಾಗುತ್ತಿದ್ದೇವೆ?" ಎಂದಿರಬಹುದು (ಮಾರ್ಕ 4:38; KJV). ಗಲಿಲಾಯದ ಸಮುದ್ರವನ್ನು ಆತನು ಶಾಂತಪಡಿಸಿದಂತೆ, ಕ್ರೈಸ್ತರ ಹೃದಯಗಳಲ್ಲಿ ಉದ್ಭವಿಸುವ ಗಂಡಾಂತರಗಳಿಂದ ಪಾರುಮಾಡುತ್ತಾನೆ.[11]

## "ದೇಹಾತ್ಮಗಳನ್ನು ಗುಣಪಡಿಸುವ ಈತನಾರು?"
## (ಮತ್ತಾಯ 8:28-34; ಮಾರ್ಕ 5:1-21; ಲೂಕ 8:26-40)

ಅಂತಿಮವಾಗಿ, ಯೇಸು ತನ್ನ ಶಿಷ್ಯರೊಂದಿಗೆ ಸಮುದ್ರದ ಪೂರ್ವ ಪ್ರದೇಶಕ್ಕೆ ಬಂದರು. ಅವರು "ಗೆರೆಸೇನರ" ಸೀಮೆಗೆ ಬಂದರು ಎಂದು (ಮತ್ತಾಯ 8:28) ಮತ್ತಾಯನು ತಿಳಿಸಿರುವನು. ಮಾರ್ಕ ಮತ್ತು ಲೂಕ ಇಬ್ಬರೂ ಸಹ "ಅವರು ಗೆರೆಸೇನರ ಸೀಮೆಗೆ ಬಂದರು" ಎಂದಿರುವರು (ಮಾರ್ಕ 5:1; ಲೂಕ 8:26).[12] ಗೆರೆಸೇನರ ಸೀಮೆಯು (ಗೆರಸೇನ) ಸಮುದ್ರದ ಪೂರ್ವ ಪ್ರದೇಶದಲ್ಲಿತ್ತು. ದಕ್ಷಿಣದ ಹಲವಾರು ಮೈಲುಗಳ ಪ್ರಾಂತ್ಯವನ್ನು ಗದರಾ ಎಂಬುವರು ಆಳುತ್ತಿದ್ದರು. ಆದ್ದರಿಂದ ಅದನ್ನು "ಗೆರೆಸೇನರ" ಹಾಗೂ "ಗೆದರೇನರ ಪಟ್ಟಣ" ಎಂದು ಕರೆಯುತ್ತಿದ್ದರು.[13]

ಆ ನಿರ್ಜನವಾದ ಪ್ರದೇಶದಲ್ಲಿ ಯೇಸು ವಿಶ್ರಾಂತಿ ಪಡೆಯಬೇಕೆಂದಿದ್ದರೂ, ಆತನಿಗೆ ವಿಶ್ರಾಂತಿ ದೊರೆಯಲಿಲ್ಲ; ಆತನಿಗೆ ಅಲ್ಲಿ ವಿಚಿತ್ರವಾದ ಆಹ್ವಾನಗಾರರು ಭೇಟಿಯಾದರು. "ಆ ಮೇಲೆ ಆತನು ಆಚೆದಡಕ್ಕೆ ಗದರೇನರ ಸೀಮೆಗೆ ಮುಟ್ಟಿದಾಗ ದೆವ್ವ ಹಿಡಿದವರಿಬ್ಬರು ಸಮಾಧಿಯ ಗವಿಗಳೊಳಗಿಂದ ಹೊರಟು ಆತನೆದುರಿಗೆ ಬಂದರು" (ಮತ್ತಾಯ 8:28ಎ).[14] ಮಾರ್ಕ ಹಾಗು ಲೂಕ ದೆವ್ವಹಿಡಿದ ಭಯಂಕರವಾದ ಇಬ್ಬರ ಕುರಿತಾಗಿ ತಿಳಿಸಿದರೆ ಮತ್ತಾಯನು ಇಬ್ಬರು ದೆವ್ವಹಿಡಿದವರು ಎಂದಿರುವನು.[15]

ಯೇಸು ಅವರಲ್ಲಿದ್ದ ದೆವ್ವಗಳನ್ನು ಬಿಡಿಸುತ್ತಿರುವಾಗ, ದೆವ್ವಗಳು ಹಂದಿಗಳೊಳಗೆ ಪ್ರವೇಶ ಮಾಡಲು ಅಪ್ಪಣೆ ಕೇಳಿದವು.[16] ಗುಡ್ಡಗಳ ಬಳಿಯಿಂದ ಹಂದಿಗಳೊಳಗೆ ದೆವ್ವಗಳು ಸೇರಿಕೊಳ್ಳಲು,[17] ಕಡಿದಾದ ಸ್ಥಳದಂದ ಓಡಿ ಸಮುದ್ರದ ನೀರಿನಲ್ಲಿ ಮುಳುಗಿ ಸತ್ತವು.

ಕೆಲವು ವರ್ಷಗಳ ಹಿಂದೆ, John S. Sweeney, ಸಂಘ ಪರಿವಾರದ ಒಬ್ಬ ಪ್ರಸಂಗಿಯ ಬಳಿಯಲ್ಲಿ ದೀಕ್ಷಾಸ್ನಾನದ ಕ್ರಮದ ಬಗ್ಗೆ ಚರ್ಚಿಸುತ್ತಿರುವಾಗ: ಹೊಸ ಒಡಂಬಡಿಕೆಯ ದೀಕ್ಷಾಸ್ನಾನವು ಮುಳುಗಿಸುವದೇ ಅಥವಾ ಚಿಮುಕಿಸುವದೋ ಎಂದು ತರ್ಕ ಮಾಡುತ್ತಿದ್ದರು ದೀಕ್ಷಾಸ್ನಾನದ ವಿಧಾನದ ಬಗ್ಗೆ, "ಹೊಸ ಒಡಂಬಡಿಕೆಯು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಸಂಘ ಪರಿವಾರದ ಪ್ರಸಂಗಿಯು ತೀವ್ರವಾದ ಮಾಡಿದನು" - ನಂತರ, ಅವರು ತಮಾಷೆಯಿಂದ, ಹೌದು ಮುಳುಗಿಸುವ ದೀಕ್ಷಾಸ್ನಾನದ ಬಗ್ಗೆ ಒಂದು ಉದಾಹರಣೆಯನ್ನು ನೀಡಿ ಹೌದು ಎರಡು ಸಾವಿರ ಹಂದಿಗಳು ಸಮುದ್ರದಲ್ಲಿ ಮುಳುಗಿ ಸತ್ತು ಹೋದವು ಎಂದು ಹೇಳಿದ, "ನಂತರ, ಸಹೋದರ ಸ್ವೀನಿಯವರು ಸೈತಾನನು ತನ್ನ ಆಹಾರವನ್ನು ಕಳಕೊಂಡದ್ದರಿಂದ, ದೀಕ್ಷಾಸ್ನಾನದ ವಿಧಾನವನ್ನು ಮಾರ್ಪಡಿಸಿದ್ದಾನೆ ಅಂದರು!"[18]

ಈ ಸಂಗತಿಯನ್ನು ತಿಳಿದ ಆ ಕ್ಷೇತ್ರದ ಜನರು, ಯೇಸು ಆ ಪ್ರದೇಶವನ್ನು ತೊರೆದು ಹೋಗಬೇಕೆಂದು ಬೇಡಿಕೊಂಡರು. (ಹೆಚ್ಚು ಪ್ರಾಣಿಗಳನ್ನು ಕಳಕೊಳ್ಳಬಹುದು ಎಂದು ತಿಳಿದರು.) ಯೇಸು ಅಲ್ಲಿಂದ ಹಿಂದಿರುಗುವಾಗ, ಆತನಿಂದ ಗುಣ ಹೊಂದಿದವರಲ್ಲಿ ಒಬ್ಬನು ಯೇಸುವಿನ ಸಂಗಡ ಹೋಗಲು ಮನವಿ ಮಾಡಿ ಕೊಂಡನು (ಮಾರ್ಕ 5:18). ಆಗ ಯೇಸು, "ಅವನಿಗೆ ನೀನು ನಿನ್ನ ಮನೆಗೂ, ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥಾ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು" (ಮಾರ್ಕ 5:19).

ಬೇರೆ ಕೆಲವರಿಗೆ ಹೇಳಬೇಡಿ, ಎಂದು ಯೇಸು ಹೇಳಿದ್ದರೂ, ಈ ಮನುಷ್ಯನಿಗೆ ಸಾಕ್ಷಿ ಹೇಳು ಎಂದು ಯೇಸು ಏಕೆ ಹೇಳಿದನು ಎಂಬುದರಲ್ಲಿ ಆಶ್ಚರ್ಯವಾಗುತ್ತದೆ (ಮಾರ್ಕ 1:43, 44). ಏಕೆಂದರೆ ಇದು ಫರಿಸಾಯರ ಹಾಗೂ ಸದ್ದುಕಾಯರ ಸಮ್ಮುಖದಲ್ಲಿ ನಡೆಯದ ಕಾರ್ಯವಾಗಿದೆ. ಒಂದು ವೇಳೆ ಈ ಸ್ಥಳದಲ್ಲಿ ಯೇಸುವಿನ ಕಾರ್ಯಕ್ಕೆ ವಿರೋಧ ವ್ಯಕ್ತವಾಗುವ ಸಾಧ್ಯತೆಯಿರಲಿಲ್ಲ. ಯೇಸು ಆ ಪ್ರದೇಶವನ್ನು ಬಿಟ್ಟುಹೋಗಬೇಕೆಂಬ ಮನವಿಯು ಬಂದ ಕಾರಣ, ಯೇಸು ಅಲ್ಲಿ ಒಂದು ಸಾಕ್ಷಿಯನ್ನು ಇರಿಸಿದನು.

ಕರ್ತನು ಹೇಳಿದ್ದನ್ನೇ ಆ ಮನುಷ್ಯನು ಮಾಡಿದನು: "ಅವನು ಹೊರಟುಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೋಲಿ ಎಂಬ ಸೀಮೆಯಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು. ಎಲ್ಲರೂ ಆಶ್ಚರ್ಯಪಟ್ಟರು" (ಮಾರ್ಕ 5:20). ಅದರ ಪರಿಣಾಮವಾಗಿ, ಯೇಸು ತಿರುಗಿಕೊಂಡು ಆ ಪ್ರದೇಶಕ್ಕೆ ಬರಲು, ಅಲ್ಲಿ ಆತನಿಗೆ ಹೆಚ್ಚು ಗೌರವವುಂಟಾಯಿತು (ಮಾರ್ಕ 7:31-37).

ಇದು ಅದ್ಭುತವಾದ ಒಂದು ಕಥೆ ನಮ್ಮ ಮನಸ್ಸಿನಲ್ಲಿ ಇದರ ಕುರಿತು, ಪ್ರೀತಿ ಹೊಂದದವರನ್ನು ಪ್ರೀತಿಸಲು ಮುಂದಾಗಿರುವ "ಈತನು ಯಾರು, ಹೀಗೆ ಗುಣಪಡಿಸುವವನು ಯಾರು?" "ಈತನು ಕರುಣೆಯುಳ್ಳ ಮನುಷ್ಯನು" ಎಂಬುದೇ ಉತ್ತರವಾಗಿದೆ.

ಯೇಸು ಸಕಲರನ್ನು ಪ್ರೀತಿಸುತ್ತಾನೆ ಎಂಬುದನ್ನು ಈ ಪಾಠದಲ್ಲಿ ನೋಡುತ್ತೇವೆ. ನಿನ್ನ ಪರಿಸ್ಥಿತಿಯನ್ನು ನೋಡಿ, ಯೇಸು ನಿನ್ನನ್ನು ಪ್ರೀತಿಸಲಾರನು ಎಂದು ಭಾವಿಸುತ್ತಿಯಾ? ಕೆಟ್ಟ ಪರಿಸರದಿಂದ, ಕೆಟ್ಟವರಾದ ಆ ಜನರು ಯೇಸುವನ್ನು ಸಂಧಿಸಲು ಬಂದಂಥ ಚಿತ್ರಣವನ್ನು ನೆನಪುಮಾಡಿರಿ. ಕ್ರಿಸ್ತನು ಅವರನ್ನು ಪ್ರೀತಿಸಿದನು - ಆತನು ನಿಮ್ಮನ್ನೂ ಪ್ರೀತಿಸುತ್ತಾನೆ! (ನೋಡಿ ಪ್ರಕಟಣೆ 1:5).

## "ಪಾಪಿಗಳೊಂದಿಗೆ ಊಟಮಾಡುವ ಈತನಾರು?"

## (ಮತ್ತಾಯ 9:1, 10-17; ಮಾರ್ಕ 2:15-22; ಲೂಕ 5:29-39)

ಗೆರಸೇನೆಯವರು[20] ಆತನನ್ನು ಹೊರಟು ಹೋಗಬೇಕೆಂದು ಮನವಿ ಮಾಡಿದ ನಂತರ, "ಆತನು ದೋಣಿಯನ್ನು ಹತ್ತಿ ಸಮುದ್ರವನ್ನು ದಾಟಿ ತನ್ನ ಊರಿಗೆ ಬಂದನು" (ಮತ್ತಾಯ 9:1). ಕಪೆರ್ನೌಮಿಗೆ ಬಂದಾಗ, ದೊಡ್ಡ ಗುಂಪು ಆತನನ್ನು ಸಂಧಿಸಿತು (ನೋಡಿ ಮಾರ್ಕ 5:21; ಲೂಕ 8:40). ಮುಂದೆ ಆದ ಘಟನೆ ಹೇಳಲಸಾಧ್ಯ. ಅಲ್ಲಿ ಯೇಸು ಯಾಯೀರನ ಮಗಳನ್ನು ಮರಣದಿಂದ ಎಬ್ಬಿಸಿದನು (ಮತ್ತಾಯ 9:18-26; ಮಾರ್ಕ 5:22-43; ಲೂಕ 8:41-56). ಮುಂದಿನ ಪಾಠದಲ್ಲಿ ಈ ವಿಚಾರವನ್ನು ಚರ್ಚಿಸೋಣ, ಆದರೆ ಈಗ ಈ ಒಂದು ಕಥೆಯನ್ನು ನೋಡೋಣ.[21] ಶಿಷ್ಯತ್ವಕ್ಕಾಗಿ ಕರೆಯನ್ನು ನೀಡಿದ ನಂತರ ಕ್ರಿಸ್ತನಿಗಾಗಿ ಒಂದು ಔತಣವನ್ನು ಮತ್ತಾಯನು ಏರ್ಪಡಿಸಿದನು. ಇಲ್ಲಿ ನೀಡಿದ ಟೀಕೆಯ ಬಗ್ಗೆ ಸುವಾರ್ತೆಗಳ ಎಲ್ಲಾ ಬರಹಗಾರರು ತಿಳಿಸಿರುವರು.

### ಟೀಕೆ ಸಂಚಿಕೆ 1: ಪಾಪಿಗಳೊಂದಿಗೆ ಊಟ ಮಾಡಿದನು

"ತರುವಾಯ ಲೇವಿಯು ಮನೆಯಲ್ಲಿ ಆತನಿಗೆ ಒಂದು ದೊಡ್ಡ ಔತಣವನ್ನು ಮಾಡಿದನು" (ಲೂಕ 5:29ಎ). ಸಹಜವಾಗಿ ಮತ್ತಾಯನು ತನ್ನ ಹಳೆಯ ಸ್ನೇಹಿತರನ್ನು ಔತಣಕ್ಕೆ ಕರೆಯಲು ಸುಂಕದವರು: "... ಇತರರೂ ಗುಂಪಾಗಿ ಕೂಡಿ ಅವರ ಸಂಗಡ ಊಟಕ್ಕೆ ಕೂತುಕೊಂಡರು" (ಮಾರ್ಕ 2:15).[22]

ಟೀಕೆಯಲ್ಲಿ ನಿರತರಾಗಿರುತ್ತಿದ್ದ ಫರಿಸಾಯರು ಗುಣಗುಟ್ಟಲು ಆರಂಭಿಸಿದರು (ಲೂಕ 5:30ಎ). ಅವರು ಆತನ ಶಿಷ್ಯರಿಗೆ, "ನಿಮ್ಮ ಗುರುವು ಸುಂಕದವರ ಮತ್ತು ಪಾಪಿಗಳ ಸಂಗಡ ಯಾಕೆ ಊಟ ಮಾಡುತ್ತಾನೆ?" ಅಂದನು (ಮತ್ತಾಯ 9:11). ಅದಕ್ಕೆ ಯೇಸು ಬುದ್ಧಿ ವಂತಿಕೆಯಿಂದ ಉತ್ತರಿಸಿ, "ಅದಕ್ಕೆ ಯೇಸು - ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ನೀತಿವಂತರನ್ನು ಕರೆ ಯುವದಕ್ಕೆ ನಾನು ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು ಎಂದು ಅವರಿಗೆ ಉತ್ತರಕೊಟ್ಟನು" (ಲೂಕ 5:31, 32).[24]

### ಟೀಕೆ ಸಂಚಿಕೆ 2: ಯಾಕೆ ಉಪವಾಸ ಮಾಡುವದಿಲ್ಲ

ವಿಚಲಿತಗೊಳ್ಳದ ಫರಿಸಾಯರು ಮತ್ತೊಂದು ಬಾರಿ ಟೀಕಿಸಿ: ಪ್ರಾಯಶಃ ಯೇಸು ಮತ್ತು ಆತನ ಶಿಷ್ಯರು ಮತ್ತಾಯನು ದರ್ಪದಿಂದ ಔತಣದಲ್ಲಿ ಆನಂದಿಸುತ್ತಿದ್ದ ನಿಮಿತ್ತ: "ಯೋಹಾನನ ಶಿಷ್ಯರೂ ಫರಿಸಾಯರೂ ಉಪವಾಸವಿರುವಲ್ಲಿ, ನಿನ್ನ ಶಿಷ್ಯರು ಏಕೆ ಉಪವಾಸ ಮಾಡುವದಿಲ್ಲ?" ಅಂದರು (ಮಾರ್ಕ 2:18). ಯೋಹಾನನ ಕೆಲವು ಶಿಷ್ಯರೂ "ಯಾಕೆ?" ಸೇರಿರಲಾಗಿ ಅವರು ಈ ಪ್ರಶ್ನೆಯನ್ನು ಕೇಳಿರಬಹುದು (ಮಾರ್ಕ 9:14).[25]

ಪ್ರಶ್ನೆಯ ತಿರುಳೇನೆಂದರೆ, "ಅನೇಕ ವರ್ಷಗಳ ಹಿಂದೆ ನಮ್ಮ ಮೂಲ ಪಿತೃಗಳು ಆಚರಿಸಿದ ಸಂಪ್ರದಾಯವನ್ನು ನೀನು ಏಕೆ ಮಾಡುವದಿಲ್ಲ?" ಎಂಬದೇ.[26] ಸಂಪ್ರದಾಯಗಳಿಗೆ ದಾಸರಲ್ಲ ಎಂಬುದು ಯೇಸುವಿನ ಉತ್ತರದ ತಿರುಳಾಗಿತ್ತು. ಆ ಉತ್ತರದಲ್ಲಿ ಎರಡು

ಭಾಗಗಳಿದ್ದವು. ಸಂಪ್ರದಾಯವು ಆತನ ಶಿಷ್ಯರಿಗೆ ಅನಗತ್ಯವಿತ್ತು. ಬರಲಿದ್ದ ಮೆಸ್ಸೀಯನ ಚಿತ್ರಣವನ್ನು ಔತಣಕ್ಕೆ ಹೋಲಿಸಿದ್ದನು (ಮತ್ತಾಯ 9:15; ಮಾರ್ಕ 2:19, 20; ಲೂಕ 5:34, 35). ಇಂಥಹ ಔತಣಗಳು ಆನಂದಕ್ಕೆ ವಿನಃ ದುಃಖಕರವಲ್ಲ.[27] (ಮಾನಸಾಂತರ ಹಾಗೂ ಬಾಧೆ ಪಡುವದಕ್ಕಾಗಿ ಫರಿಸಾಯರು ಉಪವಾಸ ಮಾಡುತ್ತಿದ್ದರು.)

ಮನುಷ್ಯರು ಮಾಡಿದ ಸಂಪ್ರದಾಯಗಳು, ಮೆಸ್ಸೀಯನ ಆಳ್ವಿಕೆಗೆ ಮಾರಕವಾಗಿರುತ್ತದೆ ಎಂಬುದು ಎರಡನೆಯ ಸಂಗತಿಯಾಗಿದೆ. ಸಂಪ್ರದಾಯಗಳನ್ನು ಆತನ ಬೋಧನೆಗೆ ಹೋಲಿಸುವದು, ಹಳೆಯ ಬಟ್ಟೆಗೆ ಹೊಸ ತ್ಯಾಪೆ ಹಾಕಿದ ಹಾಗೆ (ಲೂಕ 5:36), ಅದು ಹಿಂಜಿ ಹೋಗಿ ಬಟ್ಟೆಯು ಹರಿದು ಹೋಗುತ್ತದೆ, ಮತ್ತು ಹಳೆಯ ದ್ರಾಕ್ಷೆ ಬುದ್ಧಲಿಗಳಲ್ಲಿ,[28] ಹೊಸ ದ್ರಾಕ್ಷೆ ರಸವನ್ನು ಇಡುವ ಹಾಗೆ, ಹಳೆಯದು ಹೊಸ ದ್ರಾಕ್ಷಾರಸವನ್ನು ಹಾಳು ಮಾಡುತ್ತದೆ. ಅದರಿಂದ ಬುದ್ದಲಿಗಳು ಒಡೆದು ಹೋಗುತ್ತವೆ (ಲೂಕ 5:37).[29]

ಹೊಸ ದಾರಿಯನ್ನು ಒಬ್ಬ ಫರಿಸಾಯನು ಒಪ್ಪಲಾರನು ಎಂಬದು ಸ್ಪಷ್ಟವಾಗಿದೆ: ಅವನು "ಹಳೆಯದೇ ಉತ್ತಮ" ಎಂದು ಹೇಳಿ ಹೊಸ ಬದಲಾವಣೆಯನ್ನು ಬಯಸದ ಫರಿಸಾಯನ ಬಗ್ಗೆ ಯೇಸು ಅರಿತ್ತಿದ್ದನು (ಲೂಕ 5:39).[30]

ಈ ಕಥೆಯನ್ನು ಅಂತ್ಯಗೊಳಿಸುವ ಮುನ್ನ, ಆತನು ಪಾಪಿಗಳ ಸಂಗಡ ಊಟಮಾಡಿದ್ದರಿಂದ ಉಂಟಾದ ಟೀಕೆ, ಮತ್ತು "ಪಾಪಿಗಳೊಂದಿಗೆ ಊಟ ಮಾಡುವ ಈತನಾರು?" (ಲೂಕ 5:32) ಎಂಬ ಪ್ರಶ್ನೆಗೆ, "ಈತನು ಮನುಷ್ಯ ಕುಮಾರನು ಕೆಟ್ಟು ಹೋಗಿರುವದನ್ನು ಹುಡುಕು ರಕ್ಷಿಸುವುದಕ್ಕೆ ಬಂದವನು" ಎಂಬ ವ್ಯಾಖ್ಯಾನವೇ ಉತ್ತರವಾಗಿರುತ್ತದೆ (ಲೂಕ 19:10).

ನೀನು ಪಾಪಿಯಾಗಿರುವೆಯಾ? ಆತನು ಚಿಂತೆ ಮಾಡುವನೇ? ಎಂಬ ಪ್ರಶ್ನೆಯಿದೆಯೇ? ಯೆಹೂದ್ಯರು ಕೆಟ್ಟವರೆಂದು ಭಾವಿಸಿದ ಜನರ ಸಂಗಡ ಆನಂದವಾಗಿ, ಮಾತನಾಡುತ್ತಾ ಔತಣ ಮಾಡುತ್ತಾ ಇದ್ದಾತನನ್ನು ನೋಡು. ಆತನು ಪಾಪಿಗಳನ್ನು ಪ್ರೀತಿಸುತ್ತಾನೆ! ಆತನು ನಿಮ್ಮನ್ನು ಪ್ರೀತಿಸುತ್ತಾನೆ!

## ಮುಕ್ತಾಯ

ಆತನ ಬಗ್ಗೆ ಆಶ್ಚರ್ಯ ಪಟ್ಟವರ ಕುರಿತು ಮೂರು ಉದಾಹರಣೆಗಳನ್ನು ಚರ್ಚಿಸಿದ್ದೇವೆ:

- "ಗಾಳಿಯೂ ಸಮುದ್ರವೂ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಈತನು, ಯಾರಿರಬಹುದು?" *ಶಕ್ತಿಯ* ಮನುಷ್ಯ.
- "ದೇಹಾತ್ಮಗಳನ್ನು ಗುಣಪಡಿಸುವ ಈತನಾರು?" *ಕರುಣೆಯ* ಮನುಷ್ಯ.
- "ಪಾಪಿಗಳೊಂದಿಗೆ ಊಟ ಮಾಡುವ ಈತನಾರು?" *ಉದ್ದೇಶವಿರುವ* ಮನುಷ್ಯ.

ಪಾಪಿಗಳನ್ನು ಮಾನಸಾಂತರಕ್ಕೆ ಕರೆಯುವದೇ ಇದರ ಉದ್ದೇಶವಾಗಿದೆ. ನೀನು ಇನ್ನೂ ಸಹ ಪಾಪದಲ್ಲಿರುವದಾದರೆ, ಮಾನಸಾಂತರ ಹಾಗೂ ದೀನನಾಗಿ ಆತನ ಬಳಿಗೆ ನೀನು ಬರಬೇಕು ಎಂಬದು ನನ್ನ ಪ್ರಾರ್ಥನೆಯಾಗಿದೆ. ಈತನು ಯಾರು? ಎಂಬ ಪ್ರಶ್ನೆಗೆ ನಿನ್ನ ಮನದಲ್ಲಿಯೇ ಉತ್ತರ ನೀಡು: "ನಿನ್ನನ್ನು ಪ್ರೀತಿಸಿ, ನಿನಗಾಗಿ ಪ್ರಾಣವನ್ನು ನೀಡಿದವನೇ ಆತನು!"

---

## ಮಾಹಿತಿ

ಪಾಠದ ಪ್ರತಿಯೊಂದು ದೃಷ್ಟಾಂತಗಳು ಪ್ರಸಂಗಗಳಿಗೆ ಸಂಪನ್ಮೂಲವಾಗಿದೆ. ಮುಂದಿನ ಪ್ರಸಂಗದಲ್ಲಿ ಗೆರೆಸೇನರಲ್ಲಿ ದೆವ್ವ ಹಿಡಿದ್ದವನನ್ನು ಯೇಸು ಗುಣಪಡಿಸಿದ ಸಂಗತಿಯನ್ನು ನೀಡಲಾಗಿದೆ.

ಸಮುದ್ರವನ್ನು ಶಾಂತಗೊಳಿಸಿದ ಬಗ್ಗೆ ಅನೇಕ ಪ್ರಸಂಗಗಳನ್ನು ಮಾಡಲಾಗಿದೆ. ಜೀವಿತದ ಅಶಾಂತತೆಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಮಾತನಾಡಿದ್ದೇನೆ. ನನ್ನ ಕೇಳುಗರು ಅನುಭವಿಸಿದ ಧೈಹೀಕವಾದ ಬಿರುಗಾಳಿಯ ಬಗ್ಗೆ ತಿಳಿಸಿ, ಅವರು ಎದುರಿಸಬೇಕಿದ್ದ ಜೀವಿತದ ಬಿರುಗಾಳಿಯ ಬಗ್ಗೆ ಮಾತನಾಡಿದೆ. ಅನೇಕ ಸಾರಿ ನಾವುಗಳು ಸಹ ಶಿಷ್ಯರಂತಿದ್ದೇವೆ: ಗುರುವೇ ನಾವು ನಾಶವಾಗುವದರಲ್ಲಿ ನಿನಗೆ ಚಿಂತೆ ಇಲ್ಲವೇ? ಅಪೊಸ್ತಲರ ಪ್ರಶ್ನೆಯು ನನ್ನ ಪ್ರಮುಖ ಅಂಶವಾಗಿದೆ: ಈತನು ಯಾರು? (ಮತ್ತಾಯ 8:27) ಅದಕ್ಕೆ ನನ್ನ ಉತ್ತರ: (1) ಆತನು ನಿನ್ನನ್ನು ಪ್ರೀತಿಸುವ ವ್ಯಕ್ತಿ (ಪ್ರಕಟನೆ 1:5); (2) ನಿನ್ನೊಂದಿಗೆ ಇರುತ್ತೇನೆ ಎಂದು ವಾಗ್ದಾನ ಮಾಡಿದಾತನು (ಮತ್ತಾಯ 28:20); (3) ನಿನಗೆ ಬಲಕೊಡುವ ವ್ಯಕ್ತಿ (ಎಫೆಸ 3:16); (4) ಕೆಟ್ಟದ್ದರಿಂದ ಒಳ್ಳೆಯದನ್ನು ಬರಮಾಡುವವನು (ರೋಮಾಪುರ 8:28); (5) ಸಮುದ್ರವನ್ನು ಶಾಂತಗೊಳಿಸುವಂತೆ, ನಿನ್ನ ಹೃದಯದಲ್ಲಿನ ದುಗುಡಗಳನ್ನು ಶಾಂತಪಡಿಸುವವನು. "ನಮ್ಮ ಬಗ್ಗೆ ಚಿಂತಿಸುವದಿಲ್ಲವೇ?" ಎಂಬುದು ಪ್ರಸಂಗದ ಮುಖ್ಯಾಂಶ?

ಸಮಾಧಾನವಿರಲಿ: "ಮಾಸ್ಟರ್ ದಿ ಟೆಂಪೆಸ್ಟ್ ಈಸ್ ರ್ಯಾಗಿಂಗ್" ಎಂಬ ಹಾಡನ್ನು ಹಾಡಬಹುದು. ನಮ್ಮ ಪಾಠಗಳಲ್ಲಿ ಪ್ರಸಂಗಗಳಿವೆ. ಶಿಷ್ಯರಲ್ಲಿ ಅನೇಕರು "ಸ್ವಾಭಾವಿಕವಾಗಿದ್ದ ಯೇಸುವನ್ನು ಅಂಗೀಕರಿಸಿದರು" (ಮಾರ್ಕ 4:36). ಆತನನ್ನು ಆತನ ಸಭೆಯನ್ನು, ಆತನ ಬೋಧನೆಗಳನ್ನು ಇರುವಂತೆಯೇ ಒಪ್ಪಿಕೊಳ್ಳಬೇಕು (ಮೂಲ ಅರ್ಥವನ್ನು ತಿಳಿಸಿ). ಯೇಸು ತಿಳಿಸಿದ ಉತ್ತಮ ವೈದ್ಯನ ಕುರಿತಾಗಿಯೂ ಹೇಳಿ (ಮತ್ತಾಯ 9:12) "ಘನ ವೈದ್ಯನ" ಕುರಿತ ಇತರೆ ಪ್ರಸಂಗಗಳಿವೆ.

---

ಟಿಪ್ಪಣಿಗಳು

[1]ಯೇಸು ಎರಡು ಸಾರಿ ಬಿರುಗಾಳಿಯನ್ನು ನಿಲ್ಲಿಸಿದನು, ಇದು ಮೊದಲನೆಯದು. [2]ಮುಂದೆ ಶಿಷ್ಯರಾಗುವದಕ್ಕಿದ್ದವರ ಬಗ್ಗೆ ತಿಳಿಸಲಾಗಿದೆ (ಮತ್ತಾಯ 8:19-22). ಲೂಕನು ಈ ಮೊದಲೆ ಇದನ್ನು ತಿಳಿಸಿದ್ದನು, ಲೂಕ 9:57-62. ಇದರ ಬಗ್ಗೆ ಹೆಚ್ಚಿನ ಅಧ್ಯಾಯನಕ್ಕಾಗಿ ನಾವು ಲೂಕ 9ರ ವರೆಗೆ ಕಾಯೋಣ. [3]ಸಾಯಂಕಾಲ, ಎಂಬದು ಯೋಗ್ಯವಾಗಿದೆ. ಸಾಯಂಕಾಲದ ಆದಿ ಅಥವಾ ಅಂತ್ಯ (ಮಾರ್ಕ 5:6). ಅವರು ಆಚೆ ದಡವನ್ನು ಸೇರಿದಾಗ ದೆವ್ವ ಹಿಡಿದ ಒಬ್ಬನು ಅವರನ್ನು ಕಾಣುವಷ್ಟು ಬೆಳಕಿತ್ತು. ಮರು ಮುಂಜಾನೆ ಅವರು ಅಲ್ಲಿದ್ದರು. [4]ಅವತಾರದ ಕುರಿತು ಈಗಾಗಲೇ ಚರ್ಚಿಸಿದ್ದೇವೆ. [5]J. W. Shepard, *The Christ of the Gospels* (Nashville: Parthenon Press, 1939), 232; quoted in H. I. Hester, *The Heart of the New Testament* (Liberty, Mo.: Quality Press, 1963), 148. [6]*ಕ್ರಿಸ್ತನ ಜೀವನ ಚರಿತ್ರೆ*ಯ ಪಾಠದಲ್ಲಿನ ಗಲಿಲಾಯ ತೀರದ ಭೂಪಟವನ್ನು ನೋಡಿರಿ. [7]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 343. [8]ಅವರ ಹಾಗೆ ಯೇಸು ಸಹ ಚಿಂತೆವುಳ್ಳವನಾಗಬೇಕು ಎಂದು ಅವರು ಬಯಸಿದರು. ಚಿಂತೆಯ ಸಮಯದಿ ಅನ್ಯೋನ್ಯತೆ ಬಯಸುತ್ತೇವೆ. [9]ಸಮುದ್ರ ಶಾಂತವಾದ ನಂತರದ ಗದರಿಕೆಯ ಕುರಿತು ಮಾರ್ಕ ಮತ್ತು ಲೂಕ ದಾಖಲಿಸಿರುವರು (ಮಾರ್ಕ 4:40; ಲೂಕ 8:25). [10]ಇತರೆ ಮಹತ್ಕಾರ್ಯಗಳಿಗಿಂತಲೂ, ಈ ಅದ್ಭುತವು ಹೆಚ್ಚು ಪರಿಣಾಮಕಾರಿಯಾಗಿತ್ತು.

[11]"ಮಾಸ್ಟರ್ ದಿ, ಟೆಂಪೆಸ್ಟ್ ಈಸ್ ರ್ಯಾಗಿಂಗ್" ಹಾಡನ್ನು ಹಾಡಿರಿ. [12]ಯಲ್ಲಿ ಬೇರೆ ಅಕ್ಷರಗಳಿವೆ, ಅದು ಪ್ರಮುಖವಲ್ಲ. [13]ಸತ್ಯವೇದದ ಟೀಕಾಕಾರರು "ಇದನ್ನು ಭಿನ್ನ" (ಗೆರಸಾ) ಕ್ಷೆರೆಸ. [14]"ದೆವ್ವಹಿಡಿದವರ" ಕುರಿತು ಹೆಚ್ಚು ತಿಳಿಯಲು, ಮುಂದಿನ ಪ್ರಸಂಗದ ಪಾಠವನ್ನು ನೋಡಿರಿ. [15]ಸುವಾರ್ತೆಗಳಲ್ಲಿ "ಸಾಮಾನ್ಯ ಸಂಗತಿಯಾಗಿದೆ." [16]ಅವರು ಮಾಡಿದ ಮನವಿಯ ಕುರಿತು ಮುಂದಿನ ಪಾಠವನ್ನು ನೋಡಿರಿ. [17]ಕೈಸೇರದಿಂದ ಐವತ್ತು ಮೈಲುಗಳ ದೂರದಲ್ಲಿ, ಒಂದು ಬೆಟ್ಟವಿದೆ. [18]ಈ ಕಥೆಯನ್ನು J. W. Roberts' ರವರು *ಕ್ರಿಸ್ತನ ಜೀವನ ಚರಿತ್ರೆ,* 68 ಮೇಲಿನ ಪಾಠದಲ್ಲಿರುವ ಟಿಪ್ಪಣಿಯಿಂದ ಆರಿಸಲಾಗಿದೆ. Earl West ರವರು Sweeney ರವರನ್ನು ಆತನ ಕಾಲದಲ್ಲಿನ ಶ್ರೇಷ್ಟವಾದ

ತರ್ಕಮಾಡುವವರನ್ನಾಗಿ ಪರಿಗಣಿಸಿದರು (Earl I. West, *The Search for the Ancient Order*, vol. 4, *A History of The Restoration Movement 1919-1950* [Germantown, Tenn.: Religious Book Service, 1987], 214.) [19]"ದೆಕೆಪೋಲಿ" ಅಂದರೆ ಹತ್ತುಪಟ್ಟಣಗಳು. ಯೇಸುವಿನ ಕಾಲದ ಭೂಪಟ ನೋಡಿರಿ. [20]"ಗದರೇನೆ" ಎಂದು ಮತ್ತಾಯನು ಬಳಸಿದ್ದರೆ, ನಾನು "ಗೆರಸೇನೆ" ಎಂದು ಬಳಸಿದ್ದೇನೆ.

[21]ಯೇಸು ಸಮುದ್ರದ ಪಶ್ಚಿಮಕ್ಕೆ ಸೇರಿದಾಗ, ಯಾಯಿರನ ಮಗಳ ಕಾರ್ಯವನ್ನು ಸಾಮರಸ್ಯದಲ್ಲಿ ತಿಳಿಸಲಾಗಿದೆ. ಮತ್ತಾಯ 9:18ರ ಪ್ರಕಾರ, ಯಾಯಿರನ ವಿಚಾರಕ್ಕಿಂತ ಮೊದಲು, ಮತ್ತಾಯನ ಔತಣದ ಕುರಿತು ತಿಳಿಸಲಾಗಿದೆ. ಇದರಿಂದ ಕ್ರಿಸ್ತನ ಸಂಭಾಷಣೆಯನ್ನು ಯಾಯಿರನು ವಿಚ್ಛನ್ನಗೊಳಿಸಿದನು. John Broadus, ಎಂಬಾತನು ಈ ಟಿಪ್ಪಣಿಯನ್ನು ಸೇರಿಸಿದನು. "ಇದರ ಸ್ಥಾನದ (ಮತ್ತಾಯನ ಹಬ್ಬದ ಬಗ್ಗೆ) ಬಗ್ಗೆಯ ಸಮಸ್ಯೆಯನ್ನು ಪರಿಷ್ಕರಿಸಲಾಗದು, ಮತ್ತು ಈ ಭಾಗದಲ್ಲಿನ ವಿಷಯವನ್ನು ಅರ್ಥಮಾಡಿಕೊಳ್ಳಲು ಇಂತಹ ವ್ಯತ್ಯಾಸವನ್ನು ಮಾಡುವದಿಲ್ಲ. (John A. Broadus, *Harmony of the Gospels in the Revised Edition* [New York: A. C. Armstrong & Son, 1906], 36; quoted in John Franklin Carter, *A Layman's Harmony of the Gospels* [Nashville: Broadman Press, 1961], 138). ಮತ್ತಾಯನ ಹಬ್ಬಗಳನ್ನು ನೀವು ಮುಂಚಿತವಾಗಿ ಅಧ್ಯಯನ ಮಾಡಿದ್ದರೆ, ಯಾಯಿರನ ಬಗ್ಗೆ ಓದಿರಿ (ಈ ಪುಸ್ತಕದಲ್ಲಿನ ಮುಂದಿನ ಪಾಠವನ್ನು ನೋಡಿ). [22]ಈ ಪರಿಸ್ಥಿತಿಯಲ್ಲಿ J. W. McGarvey ರವರು, ಯೇಸುವಿನ ಕಾರ್ಯಗಳನ್ನು ಮತ್ತು ವಾದಗಳನ್ನು ಕುರಿತು ಒತ್ತಿ ಹೇಳಿದರು. "ದುಷ್ಟರಿಗೆ ಒಳ್ಳೆಯದನ್ನು ಮಾಡುವದಕ್ಕಾಗಿಯೇ ಅವರ ಸಂಗಡ ಬಾಂದವ್ಯವನ್ನು ಇಟ್ಟುಕೊಳ್ಳುವದರ ಬಗ್ಗೆ ನ್ಯಾಯತೀರ್ಪುಮಾಡಬಾರದು - ನಾವು ಅವರ ಆತ್ಮಕ್ಕೆ ವೈದ್ಯರಾಗಿದ್ದೇವೆ." (McGarvey and Pendleton, 350). 1 ಕೊರಿಂಥ 15:33ಯನ್ನು ನೋಡಿ. [23]ಮಾನಸಾಂತರ ಪಡದವರ "ನೀತಿ" ಯೇಸು ಸದ್ದುಕಾಯರ ಹಾಗೂ ಫರಿಸಾಯರ ಬಗ್ಗೆ ಯೇಸು ನೀಡಿದ ಸೂಚನೆ. [24]ಮತ್ತಾಯನ ಪ್ರಶ್ನೆಗೆ (ಮತ್ತಾಯ 9:12, 13) (ಹೊಶೇಯ 6:6) ಯೇಸುವಿನ ಉತ್ತರವಾಗಿದೆ. ಕರುಣೆಯನ್ನು ತೋರುವ ಹಸಿವನ್ನು ಜನರಲ್ಲಿ ನೀಗಿಸಲು, ಯೇಸು ಈ ವ್ಯಾಖ್ಯಾನ ಮಾಡಿರುವನು. ಮತ್ತಾಯ 9, ಪಾಪಿಗಳ ಮಾನಸಾಂತರದಿಂದ ಆತನ ಬಳಿಗೆ ಬರುವ ಉದ್ದೇಶ. [25]ಫರಿಸಾಯರ ಪ್ರಶ್ನೆಗಳಲ್ಲಿ ಯೋಹಾನನ ಶಿಷ್ಯರು ಪಾಲುದಾರರಾದದ್ದು ವಿಷಾದನಿಯ. [26]ಮೋಶೆಯ ಅಪ್ಪಣೆಯ ಮೇರೆಗೆ ಫರಿಸಾಯರು ಉಪವಾಸ ಮಾಡಲಿಲ್ಲ, ಅದು ಮನುಷ್ಯರ ಸಂಪ್ರದಾಯದ ಮೂಲವಾಗಿತ್ತು, *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿರುವ, ಉಪವಾಸದ ಕುರಿತು ನೋಡಿರಿ, ಅದು ಆಯ್ಕೆಗೆ ಅನುಗುಣ ವಾದ ಸಂಗತಿ. ದೈವತ್ವಕ್ಕೆ ಉಪವಾಸ ಮಾರ್ಗವಲ್ಲ. [27]ಯೇಸುವಿನ ದೃಷ್ಟಾಂತವು ಒಂದು ಸಾಮ್ಯವಾಗಿದೆ. ಅಲ್ಲಿ ಆತನು ಮೊದಲಿಗನು, ಶಿಷ್ಯರು ಸೇವಕರಾಗಿದ್ದಾರೆ. ಆತನ ಮರಣದ ಗುರುತಾಗಿ, "ಮೊದಲಿಗನು" ಎನ್ನಲಾಗಿದೆ. ಒಂದು ಕಾಲದಲ್ಲಿ ಅವರು ಉಪವಾಸ ಮಾಡುವರು, ಅಂದರೆ ಕ್ರಿಸ್ತನ ಮರಣದ ನಂತರದ ದುಃಖವಾಗಿದೆ. [28]ದ್ರವಗಳನ್ನು ತುಂಬಲು ಚರ್ಮದ ಪಾತ್ರೆಗಳನ್ನು ಬಳಸುತ್ತಿದ್ದರು. ಈಗಲೂ ಕೆಲವು ಕಡೆ ವಾಡಿಕೆಯಲ್ಲಿದೆ. ಆದರೆ ಅದು ಒಣಗಿಹೋಗುತ್ತಿತ್ತು. [29]ಲೂಕ 5:36, ಒಂದು ಸಾಮ್ಯವಾಗಿದೆ. ಅದರಲ್ಲಿನ ಯೇಸು ಹೇಳಿದ ಅಂಶಗಳನ್ನು ಮಾತ್ರ ಬಳಸಿರಿ. ಇದರೊಂದಿಗೆ ಮನುಷ್ಯ ಕಲ್ಪಿತ ಸಂಪ್ರದಾಯಗಳನ್ನು ಬಳಸುವದು ಅಪಾಯ. [30]ಪ್ರೇರಿತವಲ್ಲದ್ದರಿಂದ, ಪ್ರೇರಿತವಾದ ಸಂಪ್ರದಾಯಕ್ಕೆ ಒಳಗಾಗರಿ ಎಂದು ಯೇಸು ಬೋಧಿಸುತ್ತಿಲ್ಲ, ಆದರೆ ಫರಿಸಾಯರು ಸಂಪ್ರದಾಯದಿಂದ, ಕ್ರಿಸ್ತನ ಕಡೆಗೆ ತಿರುಗಿಕೊಳ್ಳಿರಿ ಎಂಬ ಆಲೋಚನೆಯಾಗಿದೆ.